ತಾನು ಬಂದ ಸೂಚನೆ ಕೂಗಿ ಹೇಳುತ್ತದೆ. ಹೆಣ್ಣು ಕಳ್ಳ ಕಿಂಡಿಯಲ್ಲಿ ಕಣ್ಣು ನೆಟ್ಟು ಗಂಡಿಗಾಗಿ ಸಹನೆಯಿಂದ ಗಂಟೆಗಟ್ಟಲೆ ಕಾಯುತ್ತಾ ಕೂತವಳು ಚುರುಕಾಗುತ್ತಾಳೆ. ಗೂಡಿಗೆ ಸಮೀಪ ಬಂದು ಕೂರುವ ಯಜಮಾನ ತನ್ನ ಗಂಟಲೊಳಗಿನ ಒಂದೊಂದೇ ಜೋಡಿಸಿಟ್ಟ ಬುತ್ತಿಗಂಟು ತೆಗೆಯುತ್ತಾನೆ. ಸಮಾಧಾನದಿಂದ ಗೂಡಿನೊಳಗೆ ಮೂತಿ ತೂರಿಸಿ ಪತ್ನಿಯ ಬಾಯಿಗೆ ಒಪ್ಪಿಸುತ್ತಾನೆ. ನಂತರದ ದಿನಗಳಲ್ಲಿ ಒಳಗೆ ಮಕ್ಕಳು ಪರಸ್ಪರ ಕಿರಿಚಾಡುವ, ಗೊಣಗಾಡುವ ದನಿಯನ್ನು ಆಲಿಸಿ ಗಂಡು ಹೊರಗಿನಿಂದಲೇ ಆನಂದ ಅನುಭವಿಸುತ್ತದೆ. ಪೊಟರೆಯೊಳಗೆ ನಡೆಯುವ ಯಾವ ವಿದ್ಯಮಾನಗಳೂ ಗಂಡಿನ ಕಣ್ಣಿಗೆ ಕಾಣಿಸದಿದ್ದರೂ ಅರ್ಥವಾಗುವಂತೆ ಕೇಳಿಸುತ್ತದೆ. ತನ್ನ ಗಂಡ ಬುತ್ತಿ ಹೊತ್ತು ತರುವುದನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುವ ಹೆಣ್ಣು ಪುಟ್ಟ ಕಿಂಡಿಯ ಮೂಲಕ ನಿರೀಕ್ಷೆಯ ಜಗತ್ತಿನಲ್ಲಿ ಬಾಳ್ವೆ ಮಾಡುತ್ತಾಳೆ.

ಈ ಸಮಯದಲ್ಲಿ ಶಿಕಾರಿದಾರರು ತಿಂದುಂಡು ಪೊಗದಾಸ್ತಾಗಿದೆ ಎಂದು ಗಂಡು ಮಂಗಟ್ಟೆಯನ್ನು ಒಂದೊಮ್ಮೆ ಕೊಂದು ಹಾಕಿದರೆ ಅಲ್ಲಿಗೆ ಕಥೆ ಮುಗಿದಂತೆ. ಉಸಿರಿನ ಕೊನೆ ತನಕವೂ ಕಾಯುವ ಹೆಣ್ಣು ಅಷ್ಟೂ ಮರಿಗಳ ಜೊತೆಗೆ ಉಪವಾಸದಲ್ಲೇ ಸಾಯುತ್ತಾಳೆ. ಈ ಕಾರಣಕ್ಕೇ ಈ ಹಕ್ಕಿಯನ್ನು ಕೋವಿಯಲ್ಲಿ ಶೂಟ್ ಮಾಡಲು ಹೊರಟ ಬಿರಿಯಾನಿ ಕರಿಯಪ್ಪನಿಗೆ ಕರ್ವಾಲೊ ಉಗಿದು ಬುದ್ಧಿ ಹೇಳುವುದು. ತೇಜಸ್ವಿ ಅವರ ಕರ್ವಾಲೊ ಕಾದಂಬರಿ ಓದಿದವರಿಗೆ ಈ ಪ್ರಸಂಗ ಖಂಡಿತಾ ನೆನಪಿರಬಹುದು.

ತೊಂಬತ್ತು ದಿನಗಳ ಸುದೀರ್ಘ ಅಜ್ಞಾತವಾಸ ಮುಗಿಸುವ ಹೆಣ್ಣು ತಾನೇ ಕಟ್ಟಿದ ಕಿಂಡಿಯ ಬಾಗಿಲು ಒಡೆದು ಹೊರಗೆ ಬರುತ್ತಾಳೆ. ಆ ಸಮಯದಲ್ಲಿ ಹೆಣ್ಣು ಹಕ್ಕಿ ಎಷ್ಟು ಸಾಕಾಗಿ, ರೋಸಿ ಹೋಗಿರುತ್ತಾಳೆ ಎಂದರೆ ಗೂಡು ಬಿಟ್ಟು ದೂರ ಹಾರಿ ಬಂದು ಮೌನವಾಗಿ ಕೂತು ಬಿಡುತ್ತಾಳೆ. ಅವಳೀಗ ದೈಹಿಕವಾಗಿ ಕೃಶಳಾಗಿದ್ದಾಳೆ. ಕಳಚಿ ಬಿಸಾಡಿದ ರೆಕ್ಕೆಗಳು ಮೂಡಿ ಬಂದಿದ್ದರೂ ಸುಸ್ತು, ಆಯಾಸ, ಕತ್ತಲ ಬದುಕು ಹೈರಾಣಾಗಿಸಿದೆ. ಮಕ್ಕಳನ್ನಾಗಲೀ, ಗಂಡನನ್ನಾಗಲೀ ಸದ್ಯಕ್ಕೆ ಅವಳು ಗಮನಿಸಲು ಹೋಗುವುದಿಲ್ಲ. ಈ ಸಮಯದಲ್ಲಿ ಗೂಡೊಳಗಿಂದ ಈಚೆ ಬರುವ ಮರಿಗಳಿಗೆ ಪ್ರೀತಿಯಿಂದ ಸ್ವಾಗತಿಸುವವನು ಅಪ್ಪ ಮಾತ್ರ. ತನ್ನ ಕುಟುಂಬದ ಕುಡಿಗಳು ಹೊರ ಜಗತ್ತಿಗೆ ಬಂದಾಗ ಆತ ಅನುಭವಿಸುವ ಆನಂದ ಅವನ ಸತತ ರೆಕ್ಕೆ ಬಡಿತದಲ್ಲೇ ಹುದುಗಿದೆ. ಮಕ್ಕಳ ತಲೆಯನ್ನು ಕೊಕ್ಕಿನಲ್ಲಿ ಸವರಿ ಮುದ್ದಿಸುತ್ತಾನೆ. ನೋಡು ಇದೇ ನಿಮ್ಮ ಜಗತ್ತು ಎಂದು ತಂದೆ, ಕಣ್ಣ ರೆಪ್ಪೆ ಬಡಿದು ಮಕ್ಕಳಿಗೆ ಕಾಡನ್ನು ತೋರಿಸುತ್ತಾನೆ.

ಮೊದಲೇ ಸಾಕಾಗಿ ಕೂತ ಹೆಣ್ಣು, ನಿಮ್ಮ ಸಹವಾಸವೇ ಬೇಡಪ್ಪ ಎಂದು ಒಂದು ಕಡೆ ಹೋಗಿ ತನ್ನ ದಣಿವನ್ನು ಸರಿ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಮಕ್ಕಳನ್ನು ಒಂದು ಕಡೆ ತಂದು ಕೂರಿಸಿ ಮತ್ತೆ ಆಹಾರ ಹುಡುಕಿ ತಂದು ತಿನ್ನಿಸುವ ಕೆಲಸ ಗಂಡನಿಗಿನ್ನೂ ಬಾಕಿ ಇದೆ. ಸುದೀರ್ಘ ಬಾಣಂತನ ಮುಗಿಸಿದ ಹೆಣ್ಣಿನ ಹತ್ತಿರ ಹೋಗಿ ಒಲುಮೆಯಿಂದ ಮೈ ಸವರಿ ಸಂತೈಸುತ್ತಾನೆ. ಆಕೆಯ ತಲೆಯ ಹಿಂಬದಿಯನ್ನು ಕೊಕ್ಕಿನಲ್ಲಿ ಕೆರೆದು ತಲೆ ಮಾಲೀಷ್ ಮಾಡುತ್ತಾನೆ. ಇವನ ಆರೈಕೆ, ಸಾಂತ್ವನಗಳ ಸುರಿಮಳೆ ನಡೆಯಲೇಬೇಕು.

ಮಂಗಟ್ಟೆ ಹಕ್ಕಿಗಳು ಪ್ರೀತಿ ಮತ್ತು ಪ್ರೇಮದ ವಿಷಯದಲ್ಲಿ ಬಹಳ ಸೂಕ್ಷ್ಮ. ಗಂಡು ಸತ್ತರೆ ಹೆಣ್ಣು ಒಂಟಿಯಾಗಿಯೇ ಇರುತ್ತದೆ, ಹೆಣ್ಣು ಸತ್ತರೆ ಗಂಡು ಮತ್ತೆಂದೂ ಬೇರೆಯ ಹೆಣ್ಣಿನ ಜೊತೆ ಸಂಸರ್ಗ ನಡೆಸದೇ ವಿರಹಿಯಾಗಿ ಬಾಳುತ್ತದೆ. ಮರು ಬಾಳ್ವೆಯ ಸುದ್ದಿ ಬಿಲ್‌ಕುಲ್ ಇಲ್ಲವೇ ಇಲ್ಲ. ಅಂದಾಜು ಮೂವತ್ತೈದರಿಂದ ಮೂವತ್ತೆಂಟು ವರ್ಷಗಳ ಕಾಲ ಬದುಕಬಲ್ಲ ಈ ಹಕ್ಕಿಗಳ ದಾಂಪತ್ಯವೇ ಒಂದು ಸೋಜಿಗ. ಇವನ್ನು ಬಿಟ್ಟರೆ ಕ್ರೌಂಚ (ಸಾರಸ) ಪಕ್ಷಿಗಳ ದಾಂಪತ್ಯದ ಕಥೆ ಇನ್ನೂ ತ್ಯಾಗಮಯವಾಗಿದೆ. ಇಲ್ಲಿ ಒಂದು ಕ್ರೌಂಚ ಹಕ್ಕಿ ಅಕಸ್ಮಾತ್ ಸತ್ತರೆ ಮತ್ತೊಂದು ಹಕ್ಕಿ ಎಂದಿಗೂ ಇನ್ನೊಂದು ಹಕ್ಕಿಯ ಜೊತೆ ಸಂಸಾರ ಮಾಡುವುದೇ ಇಲ್ಲ. ಸಂಗಾತಿಯ ಅಗಲಿಕೆಯಲ್ಲೇ ಊಟ ಬಿಟ್ಟು ಕೊರಗಿ ಕೊರಗಿ ಆತ್ಮಹತ್ಯೆ ಮಾಡಿ ಕೊಳ್ಳುತ್ತದೆ. ಗಂಡು ಸಾರಸ ಹತವಾಗಿ, ಆನಂತರ ಹುಟ್ಟಿದ ಹೆಣ್ಣಿನ ಆಕ್ರಂದನವೇ ಅಲ್ಲವೇ ಮಹಾಕವಿ ವಾಲ್ಮೀಕಿ ಅವರ ಮನಸ್ಸನ್ನು ಕಲಕಿದ್ದು. ರಾಮಾಯಣದ ಕಥೆಯ ಹುಟ್ಟಿಗೆ ಕಾರಣವಾದ ಸಾರಸಗಳು ಅಪೂರ್ವ ದಾಂಪತ್ಯದ ಸಂಕೇತಗಳಾಗಿವೆ.

'ಮಲೆದಾಸ ಮಂಗಟ್ಟೆಗಳ ಜೋಡಿ ಕಳೆದ